

ಹದಿನೇಳನೆಯ ಶತಮಾನದಲ್ಲಿ ಪೋರ್ಚುಗೀಸರು ಕಲಕತ್ತೆಗೆ ಬಂದು 12 ಸಾವಿರ ಎಕರೆಯ ಪೇರಲದ ಗಿಡಗಳ ಫಾರ್ಮನ್ನು ಮಾಡಿದ್ದರೆನ್ನುವ ಉಲ್ಲೇಖವಿದೆ.

ದೇವದಾಸ ಪಾರ್ವತಿಯರಂತೆ ನಮ್ಮ ಬಾಲ್ಯದಲ್ಲೂ ಪೇರಲ ನಮ್ಮ ಪಾಲಿನ ಅಮೃತಫಲವಾಗಿತ್ತು. (ಹಿಂದಿಯಲ್ಲಿ ಇದನ್ನು ಅಮರೂದ್ ಎಂದು ಕರೆಯಲು ಈ ಹಣ್ಣಿನ ಅಮೃತದಂತಹ ರುಚಿಯೇ ಕಾರಣವಾಗಿರಬಹುದು).

ಬಯಲು ಸೀಮೆಯ ಬರಡಾದ ನನ್ನ ಹಳ್ಳಿಯಲ್ಲಿ ಪೇರಲದ ಗಿಡಗಳಿಲ್ಲವಾದರೂ ಹತ್ತಿರದ ಐದಾರು ಮೈಲಿಯಾಚೆ ಹರಿಯುವ ಕೃಷ್ಣೆಯ ತಟದ ಊರುಗಳಾದ ಬಣಜವಾಡ, ಹುಲಗಬಾಳಿ, ಕೃಷ್ಣಾ ಕಿತ್ತೂರಿನ ಹೊಳೆಸಾಲಿನ ಜಮೀನುಗಳಲ್ಲಿ ಸಾಕಷ್ಟು ಹಣ್ಣಿನ ಕೃಷಿ ಮಾಡುತ್ತಿದ್ದರು. ಹೀಗೆ ಬೆಳೆದ ಹಣ್ಣುಗಳನ್ನು ಎರಡು ದೊಡ್ಡ ಕಂಡಕಗಳಲ್ಲಿ (ದೊಡ್ಡ ಬುಟ್ಟಿಯ ಆಕಾರದಲ್ಲಿ), ಕುದುರೆಯ ಮೇಲೆ ಹೊರಿಸಿಕೊಂಡು ವ್ಯಾಪಾರಸ್ಥರು ಪ್ರತೀ ಶುಕ್ರವಾರ ನಮ್ಮೂರಿನ ಸಂತೆಗೆ ಬರುತ್ತಿದ್ದರು. ಅವರು ಸಂತೆಗೆ ಬರುವುದು ತುಸು ತಡಮಾಡಿದರೆ, 'ಇನ್ನೂ ಯಾಕೆ ಬರಲಿಲ್ಲಾಂವ ಹುಲಗಬಾಳಿಯಾಂವ, ವಾರದಾಗ ಒಂದ ಸರ್ತಿ ಬಂದು ಹೋಗಾಂವ' ಎಂಬ ಬೇಂದ್ರೆಯವರ ಹಾಡನ್ನು ತಿರುಚಿ ಹೇಳುತ್ತಿದ್ದೆವು. ಹುಲಗಬಾಳಿ ನದಿ ಇಂಗಳಗಾಂವೀ, ಬಣಜವಾಡವೆಂಬ ಊರಿನಿಂದ ಈ ಕುದುರೆ ಮಾಮಾ ಬಂದು ನಮಗೆಲ್ಲ ಸಿಹಿ ಸಿಹಿಯಾದ ಪೇರಲಹಣ್ಣು ಮಾರುತ್ತಿದ್ದ. ಚಿಕ್ಕವರಾಗಿದ್ದ ನಾವು ಒಂದು ಪಾವಲಿ, ಚಾರಾಣೆ ಕೊಟ್ಟು ಅಥವ ದುಡ್ಡಿಲ್ಲದಿದ್ದರೆ ಮನೆಯ ಜೋಳ ಕಳವು ಮಾಡಿ ಅಂಗಿಯ ಉಡಿಯಲ್ಲಿ ಹಾಕಿಕೊಂಡು ಅಷ್ಟೇ ಪ್ರಮಾಣದ ಹಣ್ಣು ತಂದು ತಿನ್ನುತ್ತಿದ್ದೆವು. ಉಡಿ ತುಂಬ ಜೋಳ ಉಡಿ ತುಂಬ ಪೇರಲ.

ಇದೇ ಭಾಗದ ಹುಲಗಬಾಳಿ ಎಂಬ ಊರಿನಿಂದ ಒಬ್ಬ ನಡುವಯಸಿನ ಬಡ ಹೆಂಗಸು ಒಂದು ಚಿಕ್ಕ ಬುಟ್ಟಿಯ ಹೊತ್ತು ಪ್ರತಿದಿನ ನಮ್ಮೂರಿಗೆ ಕನಿಷ್ಠ ಐದಾರು ಕಿ.ಮೀ. ನಡೆದುಕೊಂಡೇ ಬರುತ್ತಿದ್ದಳು. ಆ ಪೇರಲ ಹಣ್ಣು ಮಾರಿ ಆಗುವ ಹತ್ತಾರು ರೂಪಾಯಿ ಸಂಪಾದನೆ ಮಾಡಿ ಮತ್ತೆ ಅವಳ ಊರಿಗೆ ನಡೆಯುತ್ತ ಹೋಗುವ ದೃಶ್ಯಗಳನ್ನು ಈಗ ಕಲ್ಪಿಸಿಕೊಂಡರೆ ಕಣ್ಣೀರಾಗುತ್ತೇನೆ. ಬಹುಶಃ ಆ ಅಮ್ಮನಿಗೆ ಸ್ವಂತ ತೋಟವಿರಲೆಲ್ಲವೆಂದು ತೋರುತ್ತದೆ. ಜಮೀನ್ದಾರರ ತೋಟದಲ್ಲಿ ಗಾಳಿಗೆ ಮಳೆಗೆ ಬಿದ್ದ ಹಣ್ಣುಗಳನ್ನು, ಕೋತಿ ಗಿಳಿ ಗೊರವಂಕಗಳು ಕಚ್ಚಿದ ಹಣ್ಣುಗಳನ್ನು ಆಯ್ದು ಜೋಪಾನವಾಗಿ ಬುಟ್ಟಿಯಲ್ಲಿಟ್ಟು, ಶುಕ್ರವಾರ ಹೊರತುಪಡಿಸಿ 'ಗಿಳಿ ಕಚ್ಚಿದ ಕೆಂಪು ಹಣ್ಣು' ತಂದು ಮಾರಾಟಮಾಡುತ್ತಿದ್ದಳು. ಅಬ್ಬಬ್ಬ ಅಂದರೆ, ಆಗಿನ ಕಾಲಕೆ ಒಂದು ಬುಟ್ಟಿ ಹಣ್ಣು ಮಾರಿದರೆ ಅವಳ ಆದಾಯ ಹೆಚ್ಚೆಂದರೆ ಹತ್ತು ಹನ್ನೆರಡು ರೂಪಾಯಿ, ಇಲ್ಲವೇ ಎರಡು ಮೂರು ಸೇರು ಜೋಳ! ಈ ಸಂಪತ್ತಿಗೆ ಅವಳು ಇಲ್ಲಿಯತನಕ ನಡೆದು ಬರುವುದೆಂದರೆ? ನಿಜ ಹೇಳಬೇಕೆಂದರೆ, ಶುಕ್ರವಾರ ಕುದುರೆಯ ಮೇಲೆ ಠೀವಿಯಿಂದ ಬರುವ ಮೀಸೆ ಮಾಮಾನ ದೊಡ್ಡ ದೊಡ್ಡ ಗಾತ್ರದ ಹಣ್ಣುಗಳಿಗಿಂತ ಈ ಶಾಂತಮ್ಮ ತರುವ ಕೆಂಪು ಬಣ್ಣದ ಗಿಳಿ ಕಚ್ಚಿದ ಹಣ್ಣುಗಳೇ ನಮಗೆ ಹೆಚ್ಚು ಇಷ್ಟವಾಗುತ್ತಿದ್ದವು.

ಊರು ಬಿಟ್ಟು ಮೂವತ್ತು ವರ್ಷಗಳಾದವು. ಊರ ಸಂತೆಗೆ ಒಮ್ಮೆ ಹೋಗಿದ್ದೆನಾದರೂ ಆ ಕುದುರೆಮಾಮ, ಶಾಂತಮ್ಮ ಅವರೆಲ್ಲ ಎಲ್ಲಿ ಹೋದರೋ? ಅಸಲು ಪೇರಲ ಹಣ್ಣುಗಳೇ ಕಾಣಿಸಲಿಲ್ಲ. ಅವರೆಲ್ಲಿ ಎಂದು ಯಾರನ್ನೂ ಕೇಳಲ್ಲಿಲ್ಲ, ಅಥವ ಆ ಜುಜುಬಿ ನಾಲ್ಕಾಣೆಯ ಹಣ್ಣು ಮಾರುವ ಶಾಂತಮ್ಮನನ್ನು ಯಃಕಶ್ಚಿತ್ ಕಾರಣಕ್ಕೆ ನೆನಪಿಟ್ಟುಕೊಳ್ಳುವ ಯಾವ ಕಾರಣಗಳೂ ಇಂದಿನ ಸದ್ದಿನ ಸಂತೆಗೆ ಇದ್ದಂತಿಲ್ಲ. ಅವರು ಕುಳಿತುಕೊಂಡು ಹಣ್ಣು ಮಾರುತ್ತಿದ್ದ ಜಾಗದಲ್ಲಿ ಹಣ ಹಂಚುವ ಎಟಿಎಮ್ ಮಷೀನು ಬಂದಿದೆ.

ನಿಮಗೆ ಗೊತ್ತಿರಲಿ, ನಾವೆಲ್ಲ ಈಗ ಸೇಬು ಎನ್ನುವ (ನಮ್ಮ ಕಡೆ ಈಗಲೂ ಈ ಹಣ್ಣಿಗೆ ಚಪ್ಪರಚಂಡು ಎಂದು ಕರೆಯುತ್ತಾರೆ) ಶ್ರೀಮಂತರ ಹಣ್ಣುಗಳನ್ನು ನೋಡುತ್ತಿದ್ದದ್ದು ಪ್ರತಿ ವರ್ಷ ಮನೆ ಮನೆಗಳಲ್ಲಿ ಮಾಡುತ್ತಿದ್ದ ಲಕ್ಷ್ಮೀ ಪೂಜೆಯ ತಟ್ಟೆಗಳಲ್ಲಿ, ಅಥವ ಶ್ರಾವಣದ ಪ್ರತಿ ವರ್ಷ ಶುಕ್ರವಾರ ಪ್ರಾಥಮಿಕ ಶಾಲೆಯಲ್ಲಿ ಮಾಡುವ ಸರಸ್ವತಿ ಪೂಜೆಯ ಸಂದರ್ಭದಲ್ಲಿ. ಆ ತಟ್ಟೆಯ ಹಣ್ಣುಗಳಿಗಾಗಿ ಮುಗಿಬಿದ್ದು, ಹಣ್ಣಿನ ತುಂಡಿಗಾಗಿ ಜಗಳ ವಿಕೋಪಕ್ಕೆ ಹೋಗಿ ಮಹಾಯುದ್ಧವೇ ನಡೆದು ಹೋಗಿ ಮೈ ಮೇಲೆ ಗಾಯಗಳಾಗುತ್ತಿದ್ದವು. ಚಿಕ್ಕು, ಬಾದಾಮಿ, ಚಪ್ಪರಚೆಂಡು – ಇವೆಲ್ಲ ದೇವದಾಸನ ಪಾರ್ವತಿಯಂತೆ ನಮಗೆಲ್ಲ ಎಟುಕಲಾರದ ಗಗನಕುಸುಮಗಳು. ಹೀಗಾಗಿ ಪೇರಲ ಒಂದೇ ನಮ್ಮ ಪಾಲಿನ ಹಸಿವು ನೀಗುವ ಹಣ್ಣು ಹಾಗು ಲಕ್ಷುರಿ.

ನಮ್ಮ ಹಳ್ಳಿಯಲ್ಲಿ ಆಗ ಯಾರಿಗಾದರೂ ಬಾಯಿ ಹುಣ್ಣಾದರೆ ಈ ಗಿಣಿ ಕಚ್ಚಿದ ಹಣ್ಣನ್ನು ತಿನ್ನಲು ಹೇಳುತ್ತಿದ್ದರು. ನಮ್ಮೂರಿನಲ್ಲಿ ಡಾಕ್ಟರ್ ಇದ್ದರೂ ಜನ ಪರಂಪರಾಗತ ನಾಟಿ ಚಿಕಿತ್ಸೆಯ ಮೊರೆ ಹೋಗುತ್ತಿದ್ದರು. ಹಾವು ಕಚ್ಚಿದರೆ ಅದೆಂತಹದೋ ಹೆಸರು ಒಡೆಯಲಾರದ ಬೇರು, ಜ್ವರಕ್ಕೆ ಬೇವಿನ ಕಾಯಿ ಹಾಗೂ ಹಾಗಲಕಾಯಿ ರಸ, ಜಾಂಡೀಸಿಗೆ ಹಸಿರುಬಳ್ಳಿ ಕಷಾಯ, ಸನ್ನಿ–ಭೀತಿಗೆ ಬಾಬಾನ ಮಠದ ತಾಯತ, ಮಂತ್ರಿಸಿ ಕೊಟ್ಟ ಬೂದಿ, ಎಲ್ಲೆಂದರಲ್ಲಿ ನೀರು ಕುಡಿದ ನಿರಾಮಯ (ಯಾವುದೇ ಕಾಯಿಲೆ ಇಲ್ಲದೆ ) ಜನ ಆರಾಮಾಗೇ ಇದ್ದರು. ಪೇರಲ ಕಾಯಿಯಲ್ಲಿ ಅತಿ ಹೆಚ್ಚು 'ವಿಟಮಿನ್ ಸಿ' ಪೋಷಕಾಂಶವಿರುವುದರಿಂದ ಸಹಜವಾಗಿ ಬಾಯಿಹುಣ್ಣು ಕಡಿಮೆಯಾಗುತ್ತಿದ್ದವು.

ಕ್ಯಾನ್ಸರ್ ಎಂಬ ರೋಗದ ಹೆಸರೇ ಆಗ ಕೇಳಿರಲಿಲ್ಲ. ಭೇದಿಗೆ ಜಾಮೂನು ಮತ್ತು ಪೇರಲ ರಸ ಕುಡಿಸುತ್ತಿದ್ದರು. ಪೇರಲ ಹಣ್ಣೊಂದು ಕೇವಲ ಹಸಿವು ನೀಗಿಸುವ ಅಮೃತ ಫಲವಾಗದೆ, ಕಾಯಿಲೆ ವಾಸಿಮಾಡುವ ಸಂಜೀವಿನಿಯೂ ಆಗಿತ್ತು. ಈಗ ಕೊರೊನಾ ಕಾಲದಲ್ಲಿ ಪ್ರತಿದಿನ ಒಂದು ಪೇರಲ ತಿಂದರೆ, ಸಾಕಷ್ಟು ಪೋಷಕಾಂಶಗಳನ್ನು ಹೊಂದಿರುವ ಆ ಹಣ್ಣು ನಮ್ಮ ದೇಹದ ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸುವುದರಲ್ಲಿ ಅನುಮಾನವೇ ಇಲ್ಲ.

ಭಾರತದಲ್ಲಿ ಇಂದಿಗೂ ಮಾವು, ಬಾಳೆ, ಮೂಸಂಬಿ ಹಣ್ಣಿನ ನಂತರ ಅತಿಹೆಚ್ಚು ಬಳಕೆಯಾಗುವ ಕಡಿಮೆ ಬೆಲೆಯ ಬಡವರ ಪಾಲಿನ ಹಣ್ಣು ಈ ಪೇರಳೆ. ಪ್ರಪಂಚದ ಒಟ್ಟು ಉತ್ಪಾದನೆಯಲ್ಲಿ ಭಾರತ ಶೇ 46ರಷ್ಟು ಫಾರ್ಮಿಂಗ್ ಮಾಡಿ, ಪೇರಳೆಯ ನಂಬರ್ ಒನ್ ರಫ್ತುದಾರ ರಾಷ್ಟ್ರವಾಗಿದೆ.

ಗಿಣಿ ಕಚ್ಚಿದ ಹಣ್ಣೆಂದು ಹೇಳುವ ಕೆಲವು ಹಣ್ಣುಗಳನ್ನು ಕೋತಿ ಕಚ್ಚಿರುತ್ತದೆ ಎನ್ನುವುದು ಶಹರಕ್ಕೆ ಬಂದ ಮೇಲೆ ತಿಳಿದಾಗ ಮೈ ಜುಮ್ ಎಂದಿತು. ಅಂದು ಇಡೀ ರಾತ್ರಿ ನನಗೆ ನಿದ್ದೆಯೇ ಬರಲಿಲ್ಲ. ಬಾಲ್ಯದಲ್ಲಿ ತಿಂದ ಪೇರುಕಾಯಿಯ ಎಣಿಸುತ್ತ ಕುಳಿತರೆ ಲೆಕ್ಕಕ್ಕೆ ಸಿಗುತ್ತಿಲ್ಲ. ಕೋತಿಗೆ ರೇಬೀಸ್ ಇದ್ದಿದ್ದರೆ ನಾನು ಎಷ್ಟು ಸಲ ಸಾಯಬೇಕಿತ್ತು? ಇತ್ತೀಚೆಗೆ ಮೆಜೆಸ್ಟಿಕ್‌ನ ಫುಟ್ ಪಾತಿನಲ್ಲಿ ವ್ಯಾಪಾರಿಯೊಬ್ಬ ಸೈಕಲ್ ಮೇಲಿನ ಬುಟ್ಟಿ ತುಂಬ ಪೇರಲಹಣ್ಣು ತುಂಬಿಸಿಕೊಂಡು ಮಾರುತ್ತಿದ್ದ. ಕಲಾತ್ಮಕವಾಗಿ ಕತ್ತರಿಸಿ ಅದರ ಮೇಲೆ ತುಸು ಉಪ್ಪು ಖಾರ ಸವರಿ ಇಟ್ಟಿದ್ದ. ಚಿಕ್ಕ ಬಾಲಕನೊಬ್ಬ ಅದನ್ನು ಈ ಜಗತ್ತಿನ ಪರಮಮೃಷ್ಟಾನ್ನ ಎನ್ನುವಂತೆ, ಯಾವ ಕಾಯಿಲೆಯ ಭಯವಿಲ್ಲದೇ ಸವಿಯುತ್ತಿದ್ದ. ನನಗೆ ತಿನ್ನಬೇಕೆನಿಸಿದರೂ ಈಗ ಬಂದಿರುವ ಯಾವ ಯಾವುದೋ ಕಾಯಿಲೆಗಳು ನೆನಪಾಗಿ ಮುಂದೆ ಹೋದೆ. ದೊಡ್ಡವರಿಗೆ ಎಷ್ಟೊಂದು ಭಯಗಳು! ಹುಚ್ಚು ಹಿಡಿಯುವುದೂ ದೊಡ್ಡವರಿಗೇ ಹೆಚ್ಚು. ಹುಚ್ಚು ಕೂಡ ಸಾಂಕ್ರಾಮಿಕವಾದ ಕಾಲವಿದು. ■